**ಓಎಸ್.502/17          ಪ್ರಾಸಾ.1**

***(ಸಾಕ್ಷಿಗೆ ದಿನಾಂಕಃ-09.01.2020 ರಂದು ಪ್ರಮಾಣ ವಚನ ಬೋಧಿಸಲಾಯಿತು)***
***ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ನಾನು ನನ್ನ ದಾವೆಯೊಂದಿಗೆ *1* ನೇ ಪ್ರತಿವಾದಿಯ ಗಂಡ ಮೃತ ಪ್ರಕಾಶ್ ನನ್ನಿಂದ ಹಣ ಪಡೆದ ಸಮಯದಲ್ಲಿ ಬರೆದುಕೊಟ್ಟ ಆನ್ ಡಿಮಾಂಡ್ ಪ್ರನೋಟನ್ನು ಹಾಜರುಪಡಿಸಿದ್ದು ಅದಕ್ಕೆ ಸದರಿ ಪ್ರಕಾಶ್ ರವರು ಸಹಿ ಮಾಡಿರುತ್ತಾರೆ. ಅದನ್ನು ನಿಪಿ-*1* ಎಂದು, ಸಹಿಯನ್ನು ನಿಪಿ.*1* ಎ ಎಂದು ಗುರುತಿಸಲಾಯಿತು, ಸದರಿ ಪ್ರಕಾಶ್ ಹಣಸಂದಾಯ ರಸೀದಿಯನ್ನು ಬರೆದುಕೊಟ್ಟಿದ್ದು ಅದಕ್ಕೆ ಸದರಿ ಪ್ರಕಾಶ್ ಸಹಿ ಹಾಕಿದ್ದು ಅದನ್ನು ನಿಪಿ.*2* ಎಂದು, ಸಹಿಯನ್ನು ನಿಪಿ.*2* ಎ ಎಂದು ಗುರುತಿಸಲಾಯಿತು. ಸದರಿ ಪ್ರನೋಟ್ ಮತ್ತು ರಸೀದಿಗೆ ಸಾಕ್ಷಿದಾರರಾಗಿ ಪುಟ್ಟೇಗೌಡ ಮತ್ತು ಮಲ್ಲೇಶ್ ಎನ್ನುವವರು ಸಹಿ ಹಾಕಿದ್ದು, ಅವುಗಳನ್ನು ಕ್ರಮವಾಗಿ ನಿಪಿ.*1* ಬಿ ಮತ್ತು ನಿಪಿ.*1* ಸಿ ಹಾಗೂ ನಿಪಿ.*2* ಬಿ ಮತ್ತು ನಿಪಿ.*2* ಸಿ ಎಂದು ಗುರುತಿಸಲಾಯಿತು. ಬಿಕ್ಲಂದಾರರಾಗಿ ಕೆ.ಜಿ. ನಾಗರಾಜರಾವ್ ಎನ್ನುವವರು ಸಹಿ ಮಾಡಿರುತ್ತಾರೆ. ಸದರಿ ಸಹಿಯನ್ನು ನಿಪಿ.*2* ಡಿ ಎಂದು ಗುರುತಿಸಲಾಯಿತು. *1* ನೇ ಪ್ರತಿವಾದಿಗೆ ನಾನು ದಿಃ *08.02.2017* ರಂದು ನನ್ನ ವಕೀಲರ ಮೂಲಕ ತಿಳುವಳಿಕೆ ನೋಟೀಸನ್ನು ನೀಡಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ನಿಪಿ.*3* ಎಂದು ಗುರುತಿಸಲಾಯಿತು. ಸದರಿ ನೋಟೀಸನ್ನು ಪ್ರತಿವಾದಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ಬಗ್ಗೆ ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ.*4* ಎಂದು ಗುರುತಿಸಲಾಯಿತು. ಸದರಿ ನೋಟೀಸನ್ನು ಪ್ರತಿವಾದಿ ತಿರಸ್ಕರಿಸಿದ್ದು, ಆ ಬಗ್ಗೆ ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತೇನೆ, ಅದನ್ನು ನಿಪಿ.*5* ಎಂದು ಗುರುತಿಸಲಾಯಿತು. ಸದರಿ ಪ್ರಕಾಶ್ ರವರ ಹೆಸರಿನಲ್ಲಿರುವ ಜಮೀನುಗಳಿಗೆ ಸಂಬಂಧಿಸಿದ *3* ಆರ್.ಟಿ.ಸಿ.ಗಳು ಮತ್ತು *2* ಎಂ.ಆರ್.ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.*6* ರಿಂದ *10* ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ**

*(ವಕೀಲರ ಕೋರಿಕೆ ಮೇರೆಗೆ ಕಾಲಾವಕಾಶ ನೀಡಲಾಯಿತು).*

***(ತೆಃನ್ಯಾಃದಲ್ಲಿ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)***

***ಓ ಹೇ ಕೇ ಸ ಇ ಒ***

***1ನೇ ಅಪರ ಸಿವಿಲ್ ನ್ಯಾಯಾಧೀಶರು***
***ಮದ್ದೂರು.***

Plaintiff is present and filed affidavit in lieu of his examination in chief. He is examined as Pw.1 and got marked Ex.p-1 to 5.

Advocate for the plaintiff filed IA u/o.6 rule 1 and 2 r/w/s.151 of CPC., along with list of witnesses.

Heard, perused the application. For the reasons stated therein, the application is allowed and the list of witnesses is taken on record.

Advocate for the plaintiff prays time. For further plaintiff evidence by: 07.06.2018.

I/c. I**I ACJ & JMFC., Maddur.**